ಮಾಡತಕ್ಕಂಥ ವಿಚಾರ ಇರುವಾಗ, ಈ ಸದನದ ಸದಸ್ಯರಾದ ನಾವು ಪ್ರಸ್ತಾಪ ಮಾಡುವುದಕ್ಕೆ ನಮಗೆ ಎಲ್ಲ ಹಕ್ಕು ಇದೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ಸಚಿವರು ಮಾತನಾಡುತ್ತಿದ್ದಾರೆ. ನೀವು ಮಧ್ಯದಲ್ಲಿ ಏಕೆ ಅಡಚಣೆ ಮಾಡುತ್ತಿದ್ದೀರಿ?

ಶ್ರೀ ಕೆ.ಹೆಚ್.ರಂಗನಾಥ:- ಅದು ಇದೆಯೋ ಇಲ್ಲವೋ ಎನ್ನುವುದನ್ನು May's ಪಾರ್ಲಿಮೆನಂಟ್ ಪ್ರೊಸೀಜರ್ ತೆಗೆದುಕೊಂಡು ನೋಡಬಹುದು. ನನಗೆ ಇದೆ ಎಂದು ಅನಿಸುತ್ತದೆ. ಸಮರ್ಥನೆ ಮಾಡುವುದಕ್ಕೆ ಸಾಧ್ಯತೆ ಇದೆ. ಆದ್ದರಿಂದ ಒಂದುವೇಳೆ ಅದು ಸರಿಯಲ್ಲವೆಂದು ಎನಿಸಿದಾಗ, ಅದನ್ನು ಪ್ರಸ್ತಾಪ ಮಾಡಿದಾಗ, ಯಾವುದೋ ದೃಷ್ಟಿಕೋನದಿಂದ ಅದು ಇಲ್ಲ, ಹಾಗೆ ಹೀಗೆ ಎಂದು ಗೊಂದಲ ಮಾಡತಕ್ಕಂಥದ್ದು ಸರಿಯಲ್ಲ. ಮಾನ್ಯ ಬಚ್ಚೇಗೌಡರು ಒಂದು ರೂಲ್ಸ್‌ನ್ನು ಪ್ರಸ್ತಾಪ ಮಾಡಿದಾಗ ಇನ್ನೊಬ್ಬ ಸದಸ್ಯರ ಮೇಲೆ ಆಪಾದನೆ ಮಾಡತಕ್ಕಂಥದ್ದು ಸರಿಯಲ್ಲ ಎನ್ನುವಂಥದ್ದನ್ನು ಈ ಸದನದ ಈ ಸದನದ ಎಲ್ಲ ಸದಸ್ಯರು ಒಪ್ಪಬೇಕಾದದ್ದು ಇದೆ. ಹಾಗೆ ಅಂದತಕ್ಷಣ ಇಬ್ಬರು ಮೂರು ಜನ ಸದಸ್ಯರು ಕುಳಿತು ಕೊಂಡು ಮಾತನಾಡುವ ಅಧಿಕಾರ ಎಲ್ಲಿ ಇದೆ? ಮಾನ್ಯ ಮೈಸೂರಿನ ಸದಸ್ಯರಾದ ಶಂಕರಲಿಂಗೇಗೌಡರು- ಇಂಗ್ಲೀಷ್ ಯೆನ್ನೋ ಅಥವಾ ಕನ್ನಡ ಹೌದೊ?ೇ ಅವರು ತಮ್ಮ ಎಲ್ಲ ಹಾವಭಾವದಿಂದ ಮಾತನಾಡಿದರು ಆಗ ಅವರು ತಮ್ಮ ಅಪ್ಪಣೆಯನ್ನು ತೆಗೆದು ಕೊಂಡಿದ್ದರೆ? ಇದು ವಿಚಾರ ಮಾಡತಕ್ಕಂಥದ್ದು. ಇವತ್ತು ಚಾರ್ಜ್‌ಶೀಟ್‌ನಲ್ಲಿ... ನಾನು ಇನ್ನೂ ಕುಳಿತುಕೊಂಡಿರುವುದಿಲ್ಲ.

(ಗೊಂದಲ)

ಸ್ವಾಮಿ, ಕೇಂದ್ರಸರ್ಕಾರ ತನ್ನ ಅಧಿಕಾರ ವ್ಯಾಪ್ತಿಯನ್ನು ಮೀರಿ ಇದನ್ನು ಬಳಸಿದೆ. ತನ್ನ ಶಕ್ತಿ ಏನಿದೆ, ಪೊಲೀಸ್, ಸಿಬಿಐ-ಯನ್ನು ದುರುಪಯೋಗ ಮಾಡಿ ಕೊಂಡಿದೆ. ಅದರ ವಿಚಾರವಾಗಿ ಎಲ್ಲವನ್ನು ಚರ್ಚೆ ಮಾಡುವ ಅಧಿಕಾರ ನಮಗೆ ಇದೆ. ನಾನು ಪ್ರಸ್ತಾಪಮಾಡತಕ್ಕಂಥಾದ್ದು ಈ ಸದನದ...

(ಗೊಂದಲ)

(ಈ ಹಂತದಲ್ಲಿ ಮಾನ್ಯ ಬಿಜೆಪಿಯ ಶಾಸಕರುಗಳಾದ ಶಂಕರಲಿಂಗೇಗೌಡ ಬಾವಿಗೆ ಬಂದರು)

(ಗೊಂದಲ)

ಅಧ್ಯಕ್ಷರು:: ಗೊಂದಲ ಮಾಡಬೇಡಿ, ನಾನು ನಿಮಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿರುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ರಂಗನಾಥ್‌ರವರು ಹಿರಿಯ ಸಂಸದೀಯ ಪಟುಗಳು, ಇವತ್ತು ಕೇಂದ್ರ ಸರ್ಕಾರ ತನ್ನ ಅಧಿಕಾರ ದುರುಪಯೋಗ ಮಾಡಿಕೊಂಡಿದೆ, ಸಿಬಿಐ ಮುಖಾಂತರ charge sheet ಹಾಕಿಸಿದೆ, ಈ ರೀತಿಯಾಗಿ ಇಲ್ಲಿ ಹೇಳುವಂಥಾದ್ದು ಸರಿಯಾದುದಲ್ಲ.

ಅವರು ಒಬ್ಬ ಹಿರಿಯ ಸಚಿವರು ಹಾಗೂ ಹಿರಿಯ ಸಂಸದೀಯ ಪಟುಗಳು.

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ, ಅವರು ಪೂರ್ಣವಾಗಿ ಮುಗಿಸಲಿ.

SRI K.H.RANGANATH:- I have yielded. The leader of the oppisition should have the courtesy of hearing me. ನಾನು ಕಾನೂನು ಪ್ರಕಾರವಾಗಿ ಮಾತನಾಡುತ್ತಿದ್ದೇನೆ. ಈ ವಿಚಾರದಲ್ಲಿ ಅದು ಸರಿಯಲ್ಲವೆಂದು ತಾವು ಹೇಳಿದರೆ ನಾನು ತಮ್ಮ ರೂಲಿಂಗಿಗೆ ತಲೆಬಾಗುತ್ತೇನೆ. ನನಗೆ ತಿಳಿದಂತೆ ನಾನು ಅದನ್ನು ಪ್ರಸ್ತಾಪ ಮಾಡುವಾಗ ತಪ್ಪು ಮಾಡಿರುವುದಿಲ್ಲ. ಕೇಂದ್ರ ಸರ್ಕಾರ ಅಧಿಕಾರ ದುರುಪಯೋಗ ಮಾಡಿಕೊಂಡರೆ, ಒಬ್ಬ ಸತ್ತ ವ್ಯಕ್ತಿ ಇಲ್ಲದೇ ಇರುವಾಗ ಅವರ ಬಗ್ಗೆ ತೇಜೋವಧೆ ಮಾಡುವುದಕ್ಕೆ ಪ್ರಯತ್ನ ಪಟ್ಟರೆ ಈ ರಾಜ್ಯದ ಎಲ್ಲ ಪ್ರಜೆಗಳ ಬಗ್ಗೆ ಈ ವೇದಿಕೆಯ ಮೂಲಕ ಪ್ರಸ್ತಾಪ ಮಾಡುವುದಕ್ಕೆ ಎಲ್ಲ ಹಕ್ಕು ಕೂಡ ನಮಗೆ ಇದೆ. ಆ ದೃಷ್ಟಿಯಿಂದ ಅದನ್ನು ಸಮರ್ಥನೆ ಮಾಡುವುದು ಅಥವಾ ವಿರೋಧ ಮಾಡತಕ್ಕಂಥದ್ದು ಕಾನೂನು ಪ್ರಕಾರ ಮಾಡಿ ಆದರೆ ತಮ್ಮ ವಿವೇಚನೆ ಬಿಟ್ಟಿದ್ದು.

ಶ್ರೀ ಬಿ.ಸೋಮಶೇಖರ್:- ಮಾನ್ಯ ಅಧ್ಯಕ್ಷರೆ, ಮಾನ್ಯ ರಂಗನಾಥ್‌ರವರು ಅಧ್ಯಕ್ಷ ಸ್ಥಾನದಲ್ಲಿ ಕೆಲಸವನ್ನು ಮಾಡಿರುತ್ತಾರೆ. ಇವತ್ತು ನಮ್ಮ ಸದನದಲ್ಲಿ ಒಬ್ಬ ಹಿರಿಯ ಸದಸ್ಯರು ಹಾಗೂ ಮಂತ್ರಗಳಾಗಿ ಅನುಭವ ಪಡೆದಿದ್ದಾರೆ. ಈ ಒಂದು ವಿಚಾರವನ್ನು ಸಮರ್ಥನೆ ಮಾಡಿಕೊಳ್ಳುವ ರೀತಿಯನ್ನು ನೋಡಿದರೆ ನನಗಂತು ನೋವು ಆಗುತ್ತದೆ. ಕಾರಣವೇ ನೆಂದರೆ)...

(ಗೊಂದಲ)

ಶ್ರೀ ಬಿ.ಸೋಮಶೇಖರ್: ನಾನು ಯಾವಾಗಲಾದರೊಮ್ಮೆ ಅಪರೂಪಕ್ಕೆ ಹೇಳುತ್ತಿರುತ್ತೇನೆ. ನಾನು ಮಾತನಾಡುವಾಗ ಒಂದು ಸೌಜನ್ಯತೆ ಇರಬೇಕು. ತಾವು ಸದಸ್ಯರಾಗಿ ಬಂದಿರುತ್ತೀರಿ. ತಾವು ಹಿರಿಯ ಸದಸ್ಯರು ತಮಗೆ ಕೇಳುವ ಸೌಜನ್ಯ ಇಲ್ಲವೆಂದರೆ ನಾನು ಕುಳಿತುಕೊಂಡು ಬಿಡುತ್ತೇನೆ. ನಾವು ಸ್ವಲ್ಪ ಗಂಭೀರತೆಯನ್ನು ಕಾಪಾಡಿಕೊಂಡು ಹೋಗಬೇಕು.

ಶ್ರೀ ವಿಜಯಕುಮಾರ ಶೆಟ್ಟಿ:- ನೀವು ಮಾತನಾಡುವಾಗ ಮಾನ್ಯ ಸಭಾಧ್ಯಕ್ಷರು ಹೇಳಿದಂತೆ ನಾವು ಯಾವಾಗಲೂ ಕೂಡ ಗಲಾಟೆಯನ್ನು ಮಾಡಲಿಲ್ಲ.

ಶ್ರೀ ಎಸ್.ಪಿ.ಮುದ್ದಹನುಮೇಗೌಡ:- ಮಾನ್ಯ ಹಿರಿಯ ಸದಸ್ಯರು ಗಂಭೀರತೆಯ ವಿಷಯದ ಬಗ್ಗೆ ಆ ಕಡೆಗೆ ಹೇಳಬೇಕು. The way the BJP members are behaving, that shows how they are responsible.. ಗಂಭೀರತೆ ಬಗ್ಗೆ ಈ ಕಡೆಗೆ ಹೇಳುವುದು ಬೇಡ. Are we not responsible members here?

ಶ್ರೀ ಬಿ.ಸೋಮಶೇಖರ (ಮಳವಳ್ಳಿ):- ಈ ಸದನದಲ್ಲಿ ಸಾರ್ವಜನಿಕವಾಗಿ ಆದಂಥ ಎಲ್ಲರ ಬಗ್ಗೆ ಮಾತನಾಡತಕ್ಕಂಥ ಅಧಿಕಾರ ಇದೆ, ಇಲ್ಲವೆಂದು ನಾವು ಹೇಳುವುದಿಲ್ಲ. ಈ ವಿಚಾರವನ್ನು ಹೋಲಿಕೆ ಮಾಡುವುದಾದರೆ ಮಾನ್ಯ ರಾಜೀವ ಗಾಂಧಿಯವರ ಬಾರ್ಜಾಶೀವ್ ಬಗ್ಗೆ ಹೇಳುವುದಾದರೆ ಅವರು ಒಬ್ಬ ಸಾಮಾನ್ಯ ಸದಸ್ಯರು ಈ ಹೌಸ್‌ನ ವಿಚಾರ ಬಂದಾಗ.

ಮೊನ್ನೆ ಉಪನಾಯಕರು ಮಾತನಾಡುವಾಗ ಈ ಸದನದ ಸದಸ್ಯರಾಗಿತಕ್ಕಂಥ ಡಾ: ಚಿತ್ತರಂಜನ್‌ರವರ ಕೊಲೆಯಾಗಿದೆ. ಅದರ ಬಗ್ಗೆ ಒಂದು ತನಿಖಾ ಆಯೋಗವನ್ನು ಮಾಡಿ ಅವರು ಒಂದು ವರದಿ ಕೊಟ್ಟಿದ್ದಾರೆ. ಈ ಸದನದ ಒಬ್ಬ ಸದಸ್ಯರ ಕೊಲೆಯಾಗಿದೆ ಅದರ ವರದಿಯನ್ನು ಒಪ್ಪಿಕೊಂಡು ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಚಾರ್ಜ್‌ಶೀಟ್ ಹಾಕಬೇಕು ಎನ್ನುವುದನ್ನು ಅವರು ತಮ್ಮ ಮಾತಿನಲ್ಲಿ ಹೇಳಿದರು. ಅದು ಪ್ರಸ್ತುತವಾಗಿದೆ. ಈ ಸದನದ ಒಬ್ಬ ಸದಸ್ಯರ ಕೊಲೆಯಾದಾಗ ಅದರ ವಿಚಾರಣೆಯಾಗಿ ಆಯೋಗ ರಚನೆಮಾಡಿ ಮಾಡತಕ್ಕಂಥದ್ದು ಇದೆ. ಮಾನ್ಯ ರಾಜೀವ ಗಾಂಧಿಯವರು ಈ ಸದನದ ಸದಸ್ಯರಾಗಿರಲಿಲ್ಲ. ಅವರು ಪಾರ್ಲಿಮೆಂಟಿನ ಸದಸ್ಯರಾಗಿ ಪ್ರಧಾನ ಮಂತ್ರಿಗಳಾಗಿದ್ದರು. ಅದನ್ನು ಅವರ ಬಗ್ಗೆ ಸಿಬಿಐ ನಡೆಸಿರತಕ್ಕಂಥ ವಿಚಾರಣೆಯ ವಿಧಾನದ ಬಗ್ಗೆ ಆಗಲಿ, ಅದನ್ನು ಡ್ರಾಪ್ ಮಾಡತಕ್ಕಂಥಾದ್ದು ಆಗಲಿ, ಸಿಬಿಐ ಬಗ್ಗೆ ಟೀಕೆ ಮಾಡತಕ್ಕಂಥ ವಿಚಾರವಾಗಲಿ ಆ ಸಂಸತ್ತಿಗೆ ಸೇರತಕ್ಕಂಥ ವಿಚಾರವೇ ಹೊರತು ತಮ್ಮ ಸದನಕ್ಕೆ ಇಲ್ಲ. ಒಂದು ವೇಳೆ ಎಲ್ಲರ ಬಗ್ಗೆ ಮಾತನಾಡಲು ಸದನಕ್ಕೆ ಅಧಿಕಾರ ಇದೆ ಎನ್ನುವುದಾದರೆ, ಇವತ್ತು ಉತ್ತರ ಪ್ರದೇಶದಲ್ಲಿ ಒಬ್ಬ ಸಾಮಾನ್ಯ ಮನುಷ್ಯ ಅಥವಾ ಒಬ್ಬ ಅಧಿಕಾರಿ ಕೊಲೆ ಆದಾಗ, ಸಿಬಿಐ ವಿಚಾರಣೆಯನ್ನು ನಡೆಸಿದಾಗ ಆ ಒಂದು ಟೀಕೆ ಮಾಡತಕ್ಕಂಥ ಅಧಿಕಾರವನ್ನು ಇಲ್ಲಿ ತಂದುಕೊಳ್ಳಬೇಕಾಗುತ್ತದೆ. ಕರ್ನಾಟಕ ವಿಧಾನಸಭೆಯಲ್ಲಿ ತೆಗೆದುಕೊಳ್ಳುವುದಕ್ಕೆ ಆ ಒಂದು ಅಧಿಕಾರ ಇದೆಯೇ ಎನ್ನುವುದನ್ನು ತಾವು ಮೊದಲು ವಿಚಾರವನ್ನು ಮಾಡಬೇಕು. ಅದನ್ನು ಇಲ್ಲಿ ಚರ್ಚೆ ಮಾಡುವುದಾದರೆ, ರಾಜೀವ ಗಾಂಧಿಯವರು ಒಬ್ಬರು ಸಾಮಾನ್ಯ ಮನುಷ್ಯರು, ಎಂದು ನಾವು ಚರ್ಚೆಗೆ ತೆಗೆದುಕೊಳ್ಳಬೇಕು. ಆ ರೀತಿಯಾಗಿ ತೆಗೆದುಕೊಳ್ಳಬೇಕಾದರೆ, ಇಡೀ ದೇಶದಲ್ಲಿ ಯಾವುದೇ ಒಬ್ಬ ಮನುಷ್ಯನ ಕೊಲೆಯಾದರು, ಅದರ ಬಗ್ಗೆ, ಸಿಬಿಐ ಬಗ್ಗೆ ಚರ್ಚೆ ನಡೆಯುವುದರೂ, ನಾವು ಚರ್ಚೆಯನ್ನು ಮಾಡೋಣ. ತಾವು ಹಿರಿಯ ರಾಜಕಾರಣಿಗಳು ಇದ್ದೀರಿ.

(ಬಿಜೆಪಿಯ ಸದಸ್ಯರು ಧರಣಿಯಿಂದ ವಾಪಸ್ಸು ತಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಂಡರು)

ಇದು ತಮಗೆ ಅರ್ಥವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ತಾವು ಇದಕ್ಕೆ ರೂಲಿಂಗ್‌ನ್ನು ಕೊಡಿ.

(ಗೊಂದಲ)

ಅಧ್ಯಕ್ಷರು: ಆಯಿತು ಕೊಡುತ್ತೇನೆ.

(ಗೊಂದಲ)

ಶ್ರೀ ಬಿ.ಎನ್.ಬಚ್ಚೇಗೌಡ:- ಮಾನ್ಯ ರಂಗನಾಥ್‌ರವರು, What he is defending, If a wrong case, because at the stage of chargesheet whether his is a deceased person or not, there is a no bar to chargesheet him. ಆಮೇಲೆ ನ್ಯಾಯಾಲಯದಲ್ಲಿ ಸತ್ತ ವ್ಯಕ್ತಿಯ ಹೆಸರನ್ನು ಬಿಡುವುದು ಅವರ ವ್ಯಾಪ್ತಿಗೆ ಬರುವಂಥಾದ್ದು. ಚಾರ್ಜ್‌ಶೀಟ್ ಸ್ಟೇಜಿನಲ್ಲಿ ಅವನು ಅಪರಾಧಿ ಆಗಲೇ ಬೇಡ ಎನ್ನುವುದು ಸರಿಯಲ್ಲ. What